**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಚನ್ನರಾಯಪಟ್ಟಣ**

**CC 98/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಪಾರ್ವತಮ್ಮ | **C.W –1** |
| ತಂದೆಯ ಹೆಸರು | ಃ | ಚೆಲುವೇಗೌಡ | **P.W – 1** |
| ವಯಸ್ಸು | ಃ | 51 ವರ್ಷ | |
| ಉದ್ಯೋಗ | ಃ | ವ್ಯವಸಾಯ | **ಪ್ರಮಾಣ ವಚನ ಬೋಧಿಸಲಾಯಿತು.** |
| ವಾಸ | ಃ | ಕುಮುದಿಹಳ್ಳಿ | ದಿನಾಂಕಃ **14.07.2023** |

---

ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನಗೆ ಗೊತ್ತು. ಚಾಸಾ–2 ರಿಂದ 6 ರವರು ಗೊತ್ತು.

ದಿನಾಂಕ 02.09.2022 ರಂದು ಸಂಜೆ ಸುಮಾರು 05.30 ಗಂಟೆ ಸಮಯದಲ್ಲಿ ನಮ್ಮ ಜಮೀನಿನಲ್ಲಿ ಉಳುಮೆ ಮಾಡಿಸಲು ನಾನು ಚಾ ಸಾ 3 ರವರನ್ನು ಕರೆದುಕೊಂಡು ಹೋಗಿದ್ದೆನು. ಆ ಸಮಯದಲ್ಲಿ ಆರೋಪಿತರು ಬಂದು ನನಗೆ ಅವಾಚ್ಯ ಶಬ್ದಗಳಿಂದ ಬೈದು ದೊಣ್ಣೆಯಿಂದ 1 ನೇ ಆರೋಪಿಯು ನನ್ನ ಬಲಗೈಗೆ ಹೊಡೆದಿರುತ್ತಾನೆ. ಆ ಸಮಯದಲ್ಲಿ ಚಾ ಸಾ 2 ಮತ್ತು 3 ರವರು ಬಂದು ಜಗಳ ಬಿಡಿಸಿದರು. ನಂತರ ಚಾ ಸಾ 4 ರವರಿಗೆ ಕರೆ ಮಾಡಿ ತಿಳಿಸಿ, ಚಾ ಸಾ 4 ರವರು ಬಂದು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾನೆ. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಹೇಳಿಕೆ ನೀಡುವ ಸಮಯದಲ್ಲಿ ನನ್ನ ಬಲಗೈಗೆ ಏಟಾಗಿದ್ದರಿಂದ ಸಹಿ ಮಾಡಲು ಸಾಧ್ಯವಾಗದೇ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ. ಸದರಿ ಹೇಳಿಕೆಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ ಪಿ 1 ಎಂದು ಗುರುತಿಸಲಾಯಿತು. ನಾನು ಪೋಲೀಸರಿಗೆ ಯಾವುದೇ ಮರುಹೇಳಿಕೆ ನೀಡಿರುವುದಿಲ್ಲ. ನನಗೆ ಹಲ್ಲೆ ಮಾಡಿರುವ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ದೊಣ್ಣೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಎಂ ಒ 1 ಎಂದು ಗುರುತಿಸಲಾಯಿತು.

**CC 98/2023**
**CW1 - PW1**

ನಾನು ನ್ಯಾಯಾಲಯಕ್ಕೆ ಬಂದು ಹೇಳಿಕೆ ನೀಡಿರುತ್ತೇನೆ.

***(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರ್ಕಾರಿ ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)***

**ಪಾಟೀ ಸವಾಲುಃ** ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

ಚಾ ಸಾ 3ರವರನ್ನು ಕರೆಯಿಸಿ ಟ್ರಾಕ್ಟರ್ ನಲ್ಲಿ ಉಳುಮೆ ಮಾಡಿಸುತ್ತಿದ್ದಾಗ ಘಟನೆ ನಡೆಯಿತು ಎಂದರೆ ಸರಿ. ದೂರಿನಲ್ಲಿ ನಾನು ಪ್ರತೀಶ ನನಗೆ ಜುಟ್ಟು ಹಿಡಿದು ಎಳೆದಾಡಿದನು ಎಂದು ತಿಳಿಸಿರಲಿಲ್ಲ, ಆದುದರಿಂದ ನಾನು ಈ ದಿನ ಠಾಣೆಗೆ ಬಂದು ಪ್ರತೀಶ ನನಗೆ ಜುಟು ಹಿಡಿದು ಎಳೆದಾಡಿದನು ಎಂದು ದಿನಾಂಕ *09.09.2022* ರಂದು ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು** – ಪಾಟಿ ಸವಾಲು ಮಾಡಲು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**Sd/-**

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.ಚನ್ನರಾಯಪಟ್ಟಣ